ಸುಧಾ



## ಯಾರು ಯಾರಿಗೆ ಅನ್ನ?

ಸೃಷ್ಟಿಯಲ್ಲಿ ಒಂದು ಜೀವಿ ಇನ್ನೊಂದರ ಅನ್ನ. 'ಆಹಾರ ಸರಪಳಿ' ಸೃಷ್ಟಿಯ ಸಮೃದ್ಧಿಗೂ ಅಚ್ಚರಿಗೂ ನಿದರ್ಶನಗಳನ್ನು ಒದಗಿಸುತ್ತಲೇ ಇರುತ್ತದೆ. ಹೊಸಪೇಟೆಯ ಮಕ್ಕಳ ತಜ್ಞ ಡಾ. ಜಿ. ರಾಜೀವ್ ಅವರು ದರೋಜಿಯಲ್ಲಿ ಕ್ಲಿಕ್ಕಿಸಿರುವ ಈ ಛಾಯಾಚಿತ್ರ ಕಾಣಿಸುತ್ತಿರುವುದು ಕೂಡ 'ಆಹಾರ ಚಕ್ರ'ದ ವಿಸ್ಮಯವನ್ನೇ. ಕಪ್ಪೆಯನ್ನು ಹಾವೊಂದು ಬೇಟೆಯಾಡುತ್ತಿರುವುದನ್ನು ಕ್ಲಿಕ್ಕಿಸುವ ತವಕದಲ್ಲಿದ್ದಾಗ, ಹಕ್ಕಿಯೊಂದು ಹಾವಿನ ಮೇಲೆ ಬಂದು ಕೂರಬೇಕೆ? ಛಾಯಾಗ್ರಾಹಕರು ಜಾಗೃತರಾಗುತ್ತಿದ್ದಂತೆ ಆ ಪಕ್ಷಿ ಹಾವನ್ನು ಬೇಟೆಯಾಡುವ ಬದಲು ಹಾವಿನಿಂದ ಕಪ್ಪೆಯನ್ನು ರಕ್ಷಿಸಿದ ಈ ದೃಶ್ಯ ಹಲವು ಕಥೆಗಳನ್ನು ಹೇಳುವಂತಿದೆ.